ಕನ್ನಡಪ್ರಭ
11.04.2016

## ಜಾಲದೊಳಗೆ ಎಲ್ಲಾ 157 ಎಪಿಎಂಸಿ | ಇದು ದೇಶದಲ್ಲೇ ಪ್ರಥಮ

# ಇನ್ನು ರಾಜ್ಯಾದ್ಯಂತ ಏಕೀಕೃತ ಆನ್‌ಲೈನ್ ಕೃಷಿ ಮಾರುಕಟ್ಟೆ

• **ಶಿವಕುಮಾರ್ ಬೆಳ್ಳಿತಟ್ಟೆ** ಬೆಂಗಳೂರು

ಇನ್ನು ರೈತರ ಉತ್ಪನ್ನಗಳನ್ನು ರಾಜ್ಯದ ಯಾವ ಮೂಲೆಯಲ್ಲಾದರೂ ಕಳಿತಲ್ಲಿಂದಲೇ ಖರೀದಿಸಬಹುದು. ಕಾರಣ ರೈತರ ಉತ್ಪನ್ನ ಮಾರಾಟಕ್ಕೆ ಇನ್ನುಮುಂದೆ ರಾಜ್ಯವೇ ಒಂದು ಮಾರುಕಟ್ಟೆಯಾಗಲಿದೆ!

ರಾಜ್ಯದಲ್ಲಿರುವ 157 ಎಪಿಎಂಸಿ ಮಾರುಕಟ್ಟೆಗಳು ಆನ್‌ಲೈನ್ ಮೂಲಕ ಏಕೀಕೃತ ವ್ಯವಸ್ಥೆ ಜಾಲಕ್ಕೆ ಒಳಗಾಗಲಿದ್ದು ಇದು ದೇಶದಲ್ಲೇ ಪ್ರಥಮ. ಇದೇ ಮಾದರಿಯಲ್ಲಿ ಕನಿಷ್ಠ 6 ರಾಜ್ಯಗಳಲ್ಲಿ ಈ ವ್ಯವಸ್ಥೆ ಅಳವಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.


ಹರಿಯಾಣ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ ಮತ್ತು ತೆಲಂಗಾಣ ಸೇರಿದಂತೆ ಕೆಲವು ರಾಜ್ಯಗಳಲ್ಲೂ ಈ ಮಾದರಿ ಜಾರಿಗೊಳಿಸಲು ಕೇಂದ್ರ ಎಲ್ಲಾ ಸಿದ್ಧತೆ ನಡೆಸಿದೆ. 'ಕರ್ನಾಟಕ ಮಾದರಿ' ಈ ಯೋಜನೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ 'ನ್ಯಾಮ' (ರಾಷ್ಟ್ರೀಯ ಅಗ್ರಿ ಮಾರುಕಟ್ಟೆ )ಹೆಸರಿನ ಯೋಜನೆಯಲ್ಲಿ ಏ.14ರಂದು ದೆಹಲಿಯಲ್ಲಿ ಪ್ರಕಟಿಸಲಿದ್ದಾರೆ.

ರಾಜ್ಯದಲ್ಲಿರುವ ಈ ಆನ್‌ಲೈನ್ ಟ್ರೇಡಿಂಗ್ ವ್ಯವಸ್ಥೆಯಿಂದ ಈಗಾಗಲೇ ನೆರೆ ರಾಜ್ಯಗಳ ವರ್ತಕರು ರಾಜ್ಯದ ಮೂಲೆಮೂಲೆಗಳ ಉತ್ಪನ್ನಗಳನ್ನು ಖರೀದಿಸುತ್ತಿದ್ದಾರೆ. ಇನ್ನು ದೇಶದ ಇತರ ರಾಜ್ಯಗಳಲ್ಲೂ ಇದು ಜಾರಿಯಾದರೆ ಇಡೀ ದೇಶವೇ ಒಂದು ಮಾರುಕಟ್ಟೆಯಾಗಲಿದೆ.

ಸದ್ಯ ರಾಜ್ಯದ 27 ಜಿಲ್ಲೆಗಳ 105 ಎಪಿಎಂಸಿ ಮಾರುಕಟ್ಟೆಗಳಲ್ಲಿ ಆನ್‌ಲೈನ್ ಖರೀದಿ, ಮಾರಾಟ ವ್ಯವಸ್ಥೆ ಇದೆ. ಇನ್ನುಳಿದ 52 ಎಪಿಎಂಸಿಗಳಿಗೆ 3 ತಿಂಗಳಲ್ಲಿ ವ್ಯವಸ್ಥೆ ವಿಸ್ತರಿಸಲಾಗುತ್ತಿದೆ. ಉತ್ಪನ್ನ ಮಾರಾಟ ಮಾಡಿದ ರೈತರಿಗೆ ನೇರ ಹಣ ಸಿಗುವಂತಾಗಲು 18 ಲಕ್ಷ ರೈತರ ಬ್ಯಾಂಕ್ ಖಾತೆಗಳನ್ನು ತೆರೆಸಲಾಗಿದ್ದು, ಈ ಬಗ್ಗೆ ಜಾಗೃತಿಯನ್ನೂ ಹೆಚ್ಚಿಸಲಾಗುತ್ತಿದೆ. ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಆನ್‌ಲೈನ್ ಸಂಪೂರ್ಣ ಆವರಿಸಿ ಇಡೀ ರಾಜ್ಯ ಏಕೀಕೃತ ಮಾರುಕಟ್ಟೆಯಾಗುತ್ತದೆ.

**ಆನ್‌ಲೈನ್ ವ್ಯವಸ್ಥೆ ಹೇಗೆ?:** ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಇಲಾಖೆ, ಸಹಕಾರ ಇಲಾಖೆ ಮತ್ತು ರೈಮ್ಸ್ ಸಂಸ್ಥೆ ಸಹಯೋಗದಲ್ಲಿ 2014ರಲ್ಲಿ 3 ಜಿಲ್ಲೆಗಳಲ್ಲಿ ಈ ಪ್ರಾಯೋಗಿಕವಾಗಿ ಯೋಜನೆ ಆರಂಭಿಸಲಾಗಿತ್ತು. ರೈತರು ಮಾರುಕಟ್ಟೆಗೆ ಬರುತ್ತಿದ್ದಂತೆ ಆರಂಭದಲ್ಲೇ ಉತ್ಪನ್ನದ ವಿವರ ದಾಖಲಿಸಲಾಗುತ್ತದೆ. ಆ ರೈತರಿಗೆ ಪ್ರತ್ಯೇಕ ಲಾಟ್ ನಂಬರ್ ನೀಡಲಾಗುತ್ತದೆ. ಉತ್ಪನ್ನ ಪ್ರದರ್ಶನ ಮತ್ತು ಇತರ ಮಾಹಿತಿ ಸೌಲಭ್ಯ ಒದಗಿಸಲಾಗುತ್ತದೆ. ಹಾಗೆಯೇ ಉತ್ಪನ್ನದ ಗುಣಮಟ್ಟ ವಿಶ್ಲೇಷಣೆ, ತೂಕ ಎಲ್ಲವನ್ನೂ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಈ ಎಲ್ಲಾ ಸೌಲಭ್ಯಗಳೂ ಉಚಿತ. ಇದನ್ನು ಆಧರಿಸಿ ವರ್ತಕರು ಆನ್‌ಲೈನ್ ಮೂಲಕ ಉತ್ಪನ್ನ ಖರೀದಿಸುತ್ತಾರೆ. ಈ ಮಾಹಿತಿ ತಕ್ಷಣ ರೈತರ ಮೊಬೈಲ್‌ಗೆ ಎಸ್‌ಎಂಎಸ್ ರೂಪದಲ್ಲಿ ಬರುತ್ತದೆ. ವರ್ತಕರು ಹಣ ಪಾವತಿಸಿ ಖರೀದಿ ಪ್ರಕ್ರಿಯೆ ಮುಗಿದ ನಂತರ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮೆ ಆಗುತ್ತದೆ.

FILE PHOTO



ರಾಜ್ಯ ಆರಂಭಿಸಿದ ಈ ಯೋಜನೆ ಇಂದು ದೇಶಕ್ಕೆ ಮಾದರಿಯಾಗಿದೆ. ಇದರಿಂದ ಪಾರದರ್ಶಕತೆ, ದಕ್ಷತೆ ಜತೆಗೆ ರೈತರಿಗೆ ಆಗುತ್ತಿದ್ದ ಅನ್ಯಾಯ ತಪ್ಪಿಸಿದಂತಾಗಿದೆ. ಹಾಗೆಯೇ ಅವರ ಹಕ್ಕುಗಳ ರಕ್ಷಣೆಯಾದಂತಾಗಿದೆ. ಆದ್ದರಿಂದ ಪ್ರಧಾನಿ ಅವರೂ ಮೆಚ್ಚಿಕೊಂಡಿದ್ದಾರೆ.

• **ಆರ್ ಮನೋಜ್**
ಸಹಕಾರ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ

### ₹21,000 ಕೋಟಿ ವಹಿವಾಟು

ನೂತನ ವ್ಯವಸ್ಥೆಯಿಂದ 2 ವರ್ಷಗಳ ಅವಧಿಯಲ್ಲಿ 44ಲಕ್ಷ ಲಾಟ್‌ಗಳಿಂದ 22 ಲಕ್ಷ ಕ್ವಿಂಟಾಲ್ ವರೆಗೂ ಕೃಷಿ ಉತ್ಪನ್ನಗಳ ವಹಿವಾಟು ನಡೆದಿದೆ. ಇದರಿಂದ ₹21,300 ಕೋಟಿಗಳಷ್ಟು ವಹಿವಾಟು ನಡೆದಿದೆ. ಆರಂಭಿಕ ವರ್ಷದಲ್ಲಿ ₹4000 ಕೋಟಿ ಆನ್‌ಲೈನ್ ಮೂಲಕವೇ ಆಗಿತ್ತು. ನಂತರದ ವರ್ಷದಲ್ಲಿ ಯೋಜನೆ ವಿಸ್ತರಿಸಿದಾಗ ₹21,300ಕ್ಕೆ ಏರಿಕೆಯಾಗಿದೆ. ಇನ್ನುಳಿದ 57 ಮಾರುಕಟ್ಟೆಗಳೂ ಆನ್‌ಲೈನ್ ಆದರೆ ಪ್ರತಿವರ್ಷ ₹25,000 ಕೋಟಿವರೆಗೂ ವಹಿವಾಟು ನಡೆಸುವ ಸಾಧ್ಯತೆ ಇದೆ. ವಿಶೇಷವೆಂದರೆ ಉತ್ತರ ಕರ್ನಾಟಕದ ಎಪಿಎಂಸಿಗಳೇ ಹೆಚ್ಚಾಗಿ ಆನ್‌ಲೈನ್ ಮಾರುಕಟ್ಟೆಗೆ ಸ್ಪಂದಿಸಿವೆ ಎಂದು ರಾಷ್ಟ್ರೀಯ ಇ-ಮಾರುಕಟ್ಟೆ ಅಧಿಕಾರಿಗಳು ಹೇಳಿದ್ದಾರೆ.

### ಉತ್ಪನ್ನದ ಮೇಲೆ ಸಾಲ

ರೈತರಿಗೆ ನಿರೀಕ್ಷಿತ ಬೆಲೆ ಸಿಗದಿದ್ದರೆ ತಮ್ಮ ಉತ್ಪನ್ನದ ಮೇಲೆ ಸಾಲ ಪಡೆಯಬಹುದು. ಉಗ್ರಾಣದಲ್ಲಿ ದಾಸ್ತಾನು ಇಟ್ಟಿರುವ ಉತ್ಪನ್ನದ ಮೇಲೆ ಸಾಲ ಪಡೆಯಬಹುದು. ವರ್ತಕರು ಬೇಕಾದ ಉತ್ಪನ್ನಗಳನ್ನು ಖರೀದಿಸಿ ಸಾಗಿಸಲು ಎಲ್ಲಿಂದ ಎಲ್ಲಿಗಾದರೂ ಪರವಾನಗಿ ಪಡೆಯಬಹುದು. ಒಂದೊಮ್ಮೆ ವರ್ತಕರು ಖರೀದಿಗೆ ಒಪ್ಪಿಗೆ ನೀಡಿ ನಂತರದಲ್ಲಿ ನಿರಾಕರಿಸಿದರೆ ಉತ್ಪನ್ನದ ಒಟ್ಟಾರೆ ಬೆಲೆಯ ಶೇ.10ರಷ್ಟು ಹಣ ರೈತರಿಗೆ ನೀಡಲಾಗುತ್ತದೆ.